***<u>Witness present and duly sworn on: 18-11-2025</u>***

***<u>Cross -Examination</u>***: by counsel for respondent No.2

ನಾನು ಅರ್ಜಿಯನ್ನು 25ದಿನ ತಡವಾಗಿ ಸಲ್ಲಿಸಿರುತ್ತೇನೆ ಎಂದರೆ ಸರಿ. ನಾನು ಪಿಯುಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಹೆಂಡತಿ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತಿದ್ದು, ಅವರು ESI ಸೌಲಭ್ಯ ಹೊಂದಿರುತ್ತಾರೆ. ಅಪಘಾತದ ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಹೋಗಿದ್ದು, ಅಲ್ಲಿಂದ ಬಸವೇಶ್ವರ ಆಸ್ಪತ್ರೆಗೆ ಹೋಗಿದ್ದು ಅಲ್ಲಿ ಚಿಕಿತ್ಸೆ ನೀಡದ ಕಾರಣ ವಿಜಯನಗರದ ಆಸ್ಪತ್ರೆಗೆ ದಾಖಲಾಗಿದ್ದೆನು, ಅಲ್ಲಿ ನನಗೆ ಶಸ್ತ್ರ ಚಿಕಿತ್ಸೆ ಸಹ ಮಾಡಿರುತ್ತಾರೆ. ನಾನು ESI ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದು ವಿಜಯನಗರದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ಚಿಕಿತ್ಸೆ ಪಡೆದ ಆಸ್ಪತ್ರೆಗಳಲ್ಲಿ ಅಪಘಾತದ ಹಿನ್ನೆಲೆಯನ್ನು ತಿಳಿಸಿರುತ್ತೇನೆ. ನಾನು ಹೋಗುತಿದ್ದ ಮೋಟಾರ ಸೈಕಲ್ ಮಾಲೀಕರು ಅನುಸೂಯಮ್ಮ ಎಂದರೆ ಸರಿ. ಅಪಘಾತದ ದಿನ ನಾನೊಬ್ಬನೇ ದ್ವಿಚಕ್ರ ವಾಹನದಲ್ಲಿ ಹೋಗುತಿದ್ದ. ಆ ದಿನ ಹೆಲ್ಮೆಟ್ ಹಾಕಿರಲಿಲ್ಲ ಎಂದರೆ ಸರಿಯಲ್ಲ. ನಾನು ಚಾಲನೆ ಮಾಡುತಿದ್ದ ಮೋಟಾರ ಸೈಕಲ್‌ಗೆ ವಿಮೆ ಇರಲಿಲ್ಲ ಎಂದರೆ ಸರಿ. ಮೋಟಾರ ಸೈಕಲ್ ನಿಂದ ನಾನೇ ಸ್ವತಃ ಬಿದ್ದು ಗಾಯಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಯಾವುದೇ ದಾಖಲೆಯಲ್ಲಿ ಟ್ರ್ಯಾಕ್ಟರ್ ಅಪಘಾತಪಡಿಸಿದೆ ಎಂದು ನಮೂದು ಇಲ್ಲ ಎಂದರೆ ನಾನು ಹೇಳಿರುತ್ತೇನೆ ಆದರೆ ಆಸ್ಪತ್ರೆಯವರು ಬರೆದುಕೊಂಡಿರುವುದಿಲ್ಲ.

ಅಪಘಾತವಾದ ದಿನ ನನ್ನ ಮನೆಯವರು ಆಸ್ಪತ್ರೆಗೆ ಬಂದಿದ್ದರು. 1ನೇ ಎದುರುದಾರ ನನಗೆ ಪರಿಚಯಸ್ಥರು ಎಂದರೆ ಸರಿಯಲ್ಲ. ಟ್ರ್ಯಾಕ್ಟರ್ನಿಂದ ಅಪಘಾತವಾಗದೇ ಇದ್ದರು ಪರಿಹಾರ ಪಡೆಯುವ ಉದ್ದೇಶದಿಂದ 1 ದಿನ ತಡವಾಗಿ ದೂರು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಮಹೇಶ್ ನನ್ನ ಚಿಕ್ಕಪ್ಪನ ಮಗ, ಆತ ಅಪಘಾತ ನೋಡಿರುವುದಿಲ್ಲ ಎಂದರೆ ಸರಿ. ಪೊಲೀಸರು ನನ್ನನ್ನು ಯಾವತ್ತೂ

ಅಪಘಾತದ ಸ್ಥಳಕ್ಕೆ ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ನಾನು ಟ್ರ್ಯಾಕರ್ ಠಾಣೆಯಲ್ಲಿ ಗುರುತಿಸಿ ಹೇಳಿರುತ್ತೇನೆ. ನಾನು, ಪೊಲೀಸರು ಮತ್ತು 1ನೇ ಎದುರುದಾರರ ಜೊತೆ ಶಾಮೀಲು ಆಗಿ 2ನೇ ಎದುರುದಾರ ಕಂಪನಿಯಿಂದ ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದಾಖಲೆ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ಅಪಘಾತದಲ್ಲಿ ಟ್ರ್ಯಾಕ್ಟರ್ ಭಾಗಿಯಾಗದೇ ಇದ್ದ ಕಾರಣ 2ನೇ ಎದುರುದಾರ ಪರಿಹಾರ ನೀಡಲು ಭಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

ನನ್ನ ತಾಯಿ ಹೆಸರಿನಲ್ಲಿ 4 ಎಕರೆ ಜಮೀನು ಇದೆ. ಸದರಿ ಜಮೀನಿನಲ್ಲಿ ಈಗ ಯಾವುದೇ ಬೆಳೆ ಬೆಳೆಯುತಿಲ್ಲ. ಅಪಘಾತದಿಂದ ನನಗೆ ಯಾವುದೇ ರೀತಿಯ ಆರ್ಥಿಕ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. ಕೃಷಿಯಿಂದ ನಾನು 30,000/- ಆದಾಯ ಗಳಿಸುತಿದ್ದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ಸರಿ, ನನಗೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-14ರಲ್ಲಿ ಆಸ್ಪತ್ರೆಯ ನೊಂದಣಿ ಸಂಖ್ಯೆ, ಜಿಎಸ್‌ಟಿ ಸಂಖ್ಯೆ ಇಲ್ಲ, ಆದ್ದರಿಂದ ಸದರಿ ಬಿಲ್ಲನ್ನು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಬಿಲ್ಲುಗಳನ್ನು ನಾನು ನಗದು ರೂಪದಲ್ಲಿ ಪಾವತಿಸಿರುತ್ತೇನೆ. ಯಾವುದೇ ಆಸ್ಪತ್ರೆಯಲ್ಲಿ 2ಲಕ್ಷಕ್ಕಿಂತ ಹೆಚ್ಚಿನ ಹಣವನ್ನು ನಗದು ರೂಪದಲ್ಲಿ ಪಡೆಯುವುದಿಲ್ಲ ಎಂದರೆ ನನಗೆ ಗೊತಿಲ್ಲ. ನಿಪಿ-14ರ ಕ್ರಮ ಸಂಖ್ಯೆಃ 1(ಎ) ಪ್ರಕಾರ ನೀವು ನಗದು ರೂಪದಲ್ಲಿ 2,45,100/- ಗಳನ್ನು ನಗದು ರೂಪದಲ್ಲಿ ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-14ರ ಕ್ರಮ ಸಂಖ್ಯೆಃ 3 ರಿಂದ 39 ಗಳಿಗೆ ಯಾವುದೇ ಪೂರಕವಾದ ವೈದ್ಯರ ಸಲಹಾ ಚೀಟಿ ಇರುವುದಿಲ್ಲ ಎಂದರೆ ಸರಿಯಲ್ಲ. ಸದರಿ ದಾಖಲೆಗಳನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ನನಗೆ ಈಗ 46 ವರ್ಷ ಎಂದರೆ ಸರಿ.

(ಎದುರುದಾರ ನಂ.1 ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)

(Computerized as per my dictation in open court)

R.O.I.&.A.C.

VIII Addl. Judge,
Court of Small Causes,
Bengaluru

ಸಾಕ್ಷಿಯ ಸಹಿಃ